## ಅಧ್ಯಾಯ : ಆರು Chapter - 6

# ಕ್ರಿಯಾತ್ಮಕ ಜನಪದ ಗೀತೆಗಳ ಛಂದಸ್ಸು, ಲಯ, ಮಟ್ಟುಗಳು

ಕವಿರಾಜಮಾರ್ಗಕಾರನು ಪ್ರಾಸಂಗಿಕವಾಗಿ ಕನ್ನಡ ಕಾವ್ಯದ ಛಂದಸ್ಸು ಲಕ್ಷಣಗಳನ್ನು ಕುರಿತು ಹೇಳುವುದಕ್ಕೂ ಮೊದಲು ಕನ್ನಡದಲ್ಲಿ ಸೈಗೊಟ್ಟ ಶಿವಮಾರ, ಓವನಿಗೆ ಮತ್ತು ಒನಕೆವಾಡುಗಳನ್ನು ರಚಿಸಿದ ವಿಷಯ ತಿಳಿದುಬರುತ್ತದೆ. ಕನ್ನಡದಲ್ಲಿ ಹಾಡುಗಬ್ಬಗಳ ಪರಂಪರೆ ನಿರಂತರವಾಗಿ ಬೆಳೆದು ಬಂದಿದ್ದರೂ, ಕವಿರಾಜಮಾರ್ಗಕಾರನ ಕಾಲಕ್ಕೆ ಆಗಲೇ ಸಂಸ್ಕೃತ ಛಂದಸ್ಸಿನ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಉಂಟಾಗಿ ದೇಸೀಯ ಹಿರಿಮೆಯನ್ನು ಬಹಳಮಟ್ಟಿಗೆ ಹಿಮ್ಮೆಟ್ಟಿಸಿರಬೇಕು. ಪಂಡಿತ ಕವಿ ಮಧುರ ಕಾವ್ಯವೆನ್ನುವುದು ಕೇವಲ ಪಂಡಿತರು ರಚಿಸುವ ಕೇಳುವ ವಸ್ತು. ಕಂಡಕಂಡವರು ಬರೆಯುವುದು, ಕೇಳುವುದು ಎಂದರೆ ಅದು ಗೊರವರ ದುಂಡಚೀ ಬೀರನ ಕಥೆ ಅಲ್ಲ ಎಂದು ಸಾರಿದ. ಆದರೆ ಇಂತಹ ಪಂಡಿತರ ಕಟ್ಟುಪಾಡಿನ ಚೌಕಟ್ಟಿನ ಆಚೆಗಿನ ಜೀವನ ಸಂಪ್ದನೆಗೆ ನಮ್ಮ ಹೃದಯವನ್ನು ತೆರೆದಿಟ್ಟ ಕನ್ನಡ ಜನಕೋಟಿ ಈ ದೇಸೀಯ ಹಾಡುಗಬ್ಬಗಳನ್ನು ಸೃಷ್ಟಿಸುತ್ತಲೇ ಬಂದಿದೆ.

ಜನಪದ ಹಾಡುಗಳು ನಮ್ಮ ನಾಡಿನ ಸಂಸ್ಕೃತಿ, ಪರಂಪರೆಗಳ ಜೀವಂತ ಸಾಕ್ಷಿಯಾಗಿವೆ. ಪಂಡಿತರ ಮನ್ನಣೆಗೆ ಪಾತ್ರವಾಗದಿದ್ದ ಕನ್ನಡ ಜಾನಪದ ಹಾಡುಗಳು ಜನತೆಯ ಅಂಗೀಕಾರ ಪಡೆದು ಮುಂದುವರೆದವು. ಸಾರ್ವಜನಿಕ ಮುದ್ರೆ ಪಡೆದು ಮೂಡಿಬಂದ ಈ ಸಾಹಿತ್ಯ ನಮ್ಮ ಜೀವನದ ಎಲ್ಲ ರಂಗಗಳಲ್ಲಿಯೂ ಒಳಹೊಕ್ಕು ಬದುಕಿನ ಎಲ್ಲ ಪದರುಗಳಲ್ಲಿ ಹರಿದಾಡಿ ತನ್ನ ವಾಮನ ಸ್ವರೂಪವನ್ನು ಪಡೆಯಿತು. ಜೀವನದ ಒಲವು-ಚೆಲುವುಗಳಿಗೆ, ಸೋವು - ಗೆಲುವುಗಳಿಗೆ, ನೋವು ನಲಿವುಗಳಿಗೆ ಸ್ಪಂದಿಸಿದ ನಮ್ಮ ಜನ ತಮ್ಮ ಜೀವನದ ಸರ್ವಕ್ರಿಯೆಗಳ ಪಾಡನ್ನು ಹಾಡನ್ನಾಗಿ ವ್ಯಕ್ತಗೊಳಿಸಿದರು.

ಆಕ್ಷಣದ, ಅಂದಂದಿನ ಕಲ್ಪನೆಗೆ ಅನುಭಾವಕ್ಕೆ ತಕ್ಕಂತೆ ಸಹಜವಾದ ರೂಪು ಕೊಟ್ಟು ಹಾಡಿದರು, ಹಾಡಿಸಿದರು. ಜನವಾಣಿಯ ತಾಯಿಬೇರಾಗಿ ಇಂದಿಗೂ ಉಳಿದುಕೊಂಡು ಬಂದ ಈ ಜಾನಪದ ಹಾಡುಗಳು ಅಪಾರವಾದ ಹರವು ಪಡೆದಿವೆ.

ನಮ್ಮ ಜನಾಂಗದ ಸರ್ವಮುಖ ಕ್ರಿಯೆಗಳೊಂದಿಗೆ ಸಮರಸ ಹೊಂದಿ ಬೆಳೆದು ಬಂದ ಈ ಹಾಡುಗಳ ಹರವು ಏಕಕಾಲಕ್ಕೆ ಅದ್ಭುತ ಆಶ್ಚರ್ಯಗಳನ್ನು ಒಡಮೂಡಿಸುತ್ತದೆ. ದೈವ, ಧಾರ್ಮಿಕ ಶ್ರದ್ಧೆಗಳ ಹಿನ್ನೆಲೆಯಲ್ಲಿ

ರಚಿತವಾದ ಪುರಾಣ, ರಾಮಾಯಣ, ಮಹಾಭಾರತ, ಶಿವಶರಣರು, ಮಾದೇಶ್ವರ, ಬಿಳಿಗಿರಿ ರಂಗ, ಏಳುಕೊಳ್ಳದ ಎಲ್ಲಮ್ಮ, ಮೈಲಾರಲಿಂಗ, ಮೊಹರಂ ಮೊದಲಾದ ವಸ್ತುಗಳನ್ನೊಳಗೊಂಡ ಹಾಡುಗಳಿಂದ ಮೊದಲುಗೊಂಡು ಮದುವೆ, ಮುಹೂರ್ತಗಳಲ್ಲಿ ಹೇಳುವ ಹಸೆಮಣೆ ಹಾಡು, ಸೋಬಾನಪದ, ಗೌರಿಶೀಗಿಪದ, ಸುಗ್ಗಿಯಲ್ಲಿ ಹೇಳುವ ಹಂತಿಹಾಡು, ಕೋಲಾಟದ ಹಾಡು, ಬೀಸುವಪದ, ಒನಕೆ ಹಾಡು, ಕರಾವಳಿ ಪ್ರದೇಶದಲ್ಲಿಯ ಅಂಬಿಗರ ಹಾಡುಗಳು, ಉತ್ಸವ ಜಾತ್ರೆಗಳಲ್ಲಿ ಹಾಡುವ ಲಂಬಾಣಿ ಹಾಡು, ಗೀಗಿ, ಗೊಂದಲಿಗರ ಹಾಡು, ಬೀರದೇವರ ಮುಂದೆ ಮತ್ತು ಭೂಮಿತಾಯಿಗೆ ಹಾಲೆರೆಯುವಾಗಿನ ಡೊಳ್ಳಿನ ಹಾಡುಗಳು, ಕಂಸಾಳೆ ಪದಗಳು ಹೀಗೆ ಇವುಗಳ ವೈವಿಧ್ಯತೆ ಬೆಳೆಯುತ್ತಲೇ ಹೋಗಿದೆ.

ಜನಪದ ಹಾಡುಗಳು ಛಂದಸ್ಸು ಮತ್ತು ಲಯವನ್ನು ಕುರಿತು ವಿವೇಚನೆ ಮಾಡುವಾಗ ಬಿ.ಎಂ.ಶ್ರೀ. ಯವರ ಕರಳು ಕರುಳನ್ನು ಮಿಡಿದು, ಅಂತರಂಗ ಅಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತವೆ ಎನ್ನುವ ಮಾತು ಕಣ್ಮುಂದೆ ಬಂದು ನಿಲ್ಲುತ್ತದೆ. ಕನ್ನಡ ಛಂದಸ್ಸಿನ ಮೇಲೆ ಸಂಸ್ಕೃತ ಛಂದಸ್ಸಿನ ಪ್ರಭಾವ ಆಗುವುದಕ್ಕಿಂತ ಮೊದಲು ನಮ್ಮಲ್ಲಿ ಪ್ರಚಲಿತವಿದ್ದ ಛಂದೋವೈವಿಧ್ಯ ಅಪಾರ. ಕನ್ನಡ ಲಕ್ಷಣ ಗ್ರಂಥಗಳಲ್ಲಿ ಉಲ್ಲೇಖಿತವಾಗಿರುವ ಮದನಾವತಿ, ಗೀತಿಕೆ ಚೌಪದಿ, ಏಳೆ, ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಷಟ್ಪದಿ, ತ್ರಿಪತಿ ಮೊದಲಾದ ಗೀತ ಪ್ರಕಾರಗಳನ್ನು ಪಂಡಿತರು ಲಾಕ್ಷಣಿಕರು, ಶಾಸ್ತ್ರ ನಿಯಮ ನಿಬಂಧಗಳಿಗೆ ಒಳಪಡಿಸಿ ಅವುಗಳ ಲಕ್ಷಣಗಳನ್ನು ಏರ್ಪಡಿಸುವುದಕ್ಕೂ ಪೂರ್ವದಲ್ಲಿ ಈ ಹಾಡುಗಳು ರೂಪಿಸಿಕೊಂಡ ಲಯ ಅದನ್ನನುಸರಿಸಿ ನಿರ್ಮಿತವಾದ ಛಂದಸ್ಸೂ ಒಂದಿದೆ. ಅದರ ಕಡೆಗೆ ಗಮನ ಸೆಳೆಯುವುದು ಇಲ್ಲಿ ಮುಖ್ಯವಾಗಿದೆ.

ಅಂತರಂಗದಲ್ಲಿ ಸ್ಫುರಿಸಿದ ಒಲವು, ಉಕ್ಕಿ ನಾದರೂಪದಲ್ಲಿ ಹೊರಹೊಮ್ಮಿ ತನಗನುಗುಣವಾದ ಲಯವನ್ನು ನಿರ್ಮಿಸಿಕೊಳ್ಳುತ್ತದೆ. ಹೀಗೆ ಅನುಸರಿಸಿಯೇ ಛಂದಸ್ಸು ತನ್ನ ರೂಪವನ್ನು ಪಡೆಯುತ್ತದೆ. ದೇಹದ ಪ್ರಾಣ ಉಸಿರಿನಲ್ಲಿ ಅಗ್ನಿಯ ಸಮ್ಮಿಲನದಿಂದ ಉಂಟಾಗುವ ಧ್ವನಿಯ ವಿಕೋಪವೆ ನಾದ. ಇದು ಸಮನಾಂತರದಲ್ಲಿ ಉಂಟಾಗುವ ಮಧುರ ಧ್ವನಿಯೇ ನಾದ. ಎರಡು ಧ್ವನಿಗಳ (ಶಬ್ದ,ಪದ) ನಡುವೆ ಇರುವ ಅಂತರವು ಒಂದೇ ಸಮನಾಗಿರುತ್ತವೆ. ಇದಕ್ಕೆ ಲಯವೆಂದು ಹೆಸರು. ಶೃತಿ ಸಂಗೀತಕ್ಕೆ ಆಧಾರವಾಗಿ ತೆಗೆದುಕೊಳ್ಳಲ್ಪಟ್ಟ ಕಿವಿಯಿಂದ ಸೂಕ್ಷ್ಮವಾಗಿ ಗ್ರಹಿಸಿಕೊಳ್ಳಲ್ಪಡುವ ನಾದ, ಬೇರೆ ಬೇರೆ ಶೃತಿಗಳನ್ನು ವರ್ಣನಾತ್ಮಕವಾಗಿ ಅಕ್ಷರದೊಂದಿಗೆ ಹೇಳುವಾಗ ಸ್ವರವಾಗುತ್ತದೆ.

ಇದು ತಾನೇ ರಂಜನೆಯನ್ನು ಕೊಡಬಹುದು. ಇಲ್ಲಿ ಹಳ್ಳಿಗರಿಗೆ, ಛಂದಸ್ಸು, ಸಂಗೀತಜ್ಞಾನ ಎರಡು ಇರುವುದಿಲ್ಲ. ಆದ್ದರಿಂದ ಗೀತೆಗಳಲ್ಲಿ ಕ್ರಿಯೆ, ತಾಳ, ಲಯ, ಸ್ವರ, ಭಾರತೀಯ ಕೃಷಿ ಜಾನಪದ ಸಂಸ್ಕೃತಿಗೆ ಆಕರವಾಗಿದೆ. ಜನಪದರು ಬೇಸರ ಕಳೆಯಲು ಆಯಾಸ ನೀಗಲು ಹಾಡಿದ ಹಾಡುಗಳು ಅವರ ಕಾರ್ಯಚಟುವಟಿಕೆಗಳ ಕ್ರಿಯೆಯಲ್ಲಿ ಸಂಗೀತಮಯವಾಗಿ ಜನಪದ ಸಾಹಿತ್ಯವಾಯಿತು. ಅವರ ಜೀವನ ಕ್ರಿಯೆಗಳನ್ನು ಅನುಕರಿಸಿ ಹೊಮ್ಮುವ ಜಾನಪದ ಹಾಡುಗಳಿಂದ ಅವರ ಕೆಲಸ ಸರಳವಾಗಿ ಸಮಯೋಚಿತವಾಗಿ ಸಾಗುತ್ತದೆ.

ಹಾಡಿನ ಕ್ರಿಯಾಸ್ವರೂಪ, ಪೆಟ್ಟು (ಸಂಯೋಗ) ಹುಸಿ (ವಿಯೋಗ), ಸಮ್ಮು (ಮುಕ್ತಾಯ) ಹೀಗೆ ಕೆಲಸದಲ್ಲಿ ತನ್ನಷ್ಟಕ್ಕೆ ತಾನೇ ಮೈದಾಳುತ್ತವೆ. ಲಯ, ನಾದ, ಛಂದಸ್ಸಿನ ರಚನೆಯಲ್ಲಿ ದ್ರಾವಿಡ ಛಂದಸ್ಸಿನ ರಹಸ್ಯ ಅಡಗಿದೆ. ದ್ವಿಪತಿ, ತ್ರಿಪದಿ, ಚೌಪದಿ ಸಾಂಗತ್ಯ ಕೆಲವು ಮಾತ್ರ ವೃತ್ತಿಗಳು ಹಾಡಿನ ರೂಪದಿಂದ ಲಯವನ್ನು ಅನುಸರಿಸಿ ಅಕ್ಷರವನ್ನು ಎಳೆದು ಹಾಡುವುದರಿಂದ ಇಲ್ಲಿ ಮಾತ್ರ ಗಣಗಳನ್ನು ತಿಳಿಯಬೇಕು ಎನ್ನುವುದು ಚಮತ್ಕಾರವಾಗಿದೆ. ಲಯ, ತಾಳಗಳು ಅಕ್ಷರಗಳ ಎಳೆತ-ಸೆಳೆತ ಅನುಸರಿಸದೆ ಮಾಡುವುದಿಲ್ಲ. ತನ್ನ ಧಾಟಿಯ ನಾದದ ಗುಂಗು ಒಮ್ಮಿಂದ ಒಮ್ಮೆಲೆ ಅಲೆಯಾಗಿ ಬರುವ ಸ್ವರಗತಿಗಳು ತಮ್ಮ ತಮ್ಮ ಲಯ, ತಾಳಗಳನ್ನು ಸೂಚಿಸಿ ಅಕ್ಷರ ಅಕ್ಷರಗಳ ಗುಂಪನ್ನು ರೂಪಿಸಿಕೊಂಡು ಆಯಾ ಗತಿಯ ಛಂದಸ್ಸಿನ ನಿರ್ಮಿತಿಗೆ ಪ್ರಚೋದಕವಾಗಿರುತ್ತದೆ.

ತಾಳ ಎನ್ನುವುದು ಬದುಕಿನ ಒಂದು ಸಹಜ ಕ್ರಿಯೆಯ ಸ್ಪಂದನೆಯ ಗತಿ, ಆಯಾ ಕೆಲಸದಲ್ಲಿ ಮಗ್ನನಾಗಿ ಖುಷಿ ಅಥವಾ ದುಃಖ ಅಥವಾ ಬೇಜಾರು ಇತ್ಯಾದಿಗಳಲ್ಲಿ ಮಾಡುವ ಕೆಲಸದಲ್ಲಿ ಬೀಸುವ ಗಾಳಿಯಲ್ಲಿ ಮಾತಾಡುವ ನುಡಿಗಳಲ್ಲಿ ಸಹಜವಾಗಿ ವ್ಯಕ್ತವಾಗುತ್ತದೆ. ಸಮಯಕ್ಕೆ ತಕ್ಕಂತೆ ಇರುತ್ತದೆ. ಅಂತೆಯೇ ಜಾನಪದ ಗಾದೆಯು ಇದೆ. 'ತಾಳಕ್ಕೆ ತಕ್ಕಂತೆ ನಡೆ' ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ. ತಾಳವೆಂದರೆ ಅದು ಒಂದು ಕಾಲನಿಯತಿ ಎಂದು ಹೇಳಬಹುದು. ಕಾಲಗತಿಗೆ ತಕ್ಕಂತೆ ಮನಸ್ಸು ಮಿಡಿಯುತ್ತದೆ, ಒಲಿಯುತ್ತದೆ. ತನ್ನದೇ ಆದ ಒಂದು ನಾದದ ರೀತಿಯನ್ನು ಸೃಜಿಸಿಕೊಳ್ಳುತ್ತದೆ. ಒಂದು ಕಾಲದಲ್ಲಿ ನಿಯತಕಾಲದಲ್ಲಿ ವ್ಯಕ್ತವಾದಾಗ ಅದನ್ನು ನಾವು ತಾಳ ಎನ್ನುತ್ತೇವೆ. ಅದೇ ಕಾಲ ನಿಯತಿಗೆ ತಾಳ- ಲಯ ಎರಡು ಪರಸ್ಪರ ಪೂರಕವಾಗಿರುತ್ತವೆ. ಲಯ ಎನ್ನುವುದು ಗಾನ, ವೇಗ ಒಂದು ತಾಳಕ್ಕೆ ಒಂದು ಸ್ವರವೇ ಗತಿ. ದೀರ್ಘವಾದ ನಾದದ ಅಲೆಯಲ್ಲಿ ಅಷ್ಟೇ ಪ್ರಮಾಣದ ಸ್ವರಗತಿಗಳು ಅಕ್ಷರವಾಗಿ ಛಂದಸ್ಸನ್ನು ರೂಪಿಸುತ್ತವೆ.

ವನಕೆವಾಡು, ಪಿರಿಯಕ್ಕರ, ದೊರೆಯಕ್ಕರ, ನಡುವಕ್ಕರ, ಕಿರಿಯಕ್ಕರ, ಮಹಾಕ್ಕರ, ಮಧುರಾಕ್ಕರ, ಕುರುಳ್, ವೆಣ್ಬಾವೃತ್ತ ಮೊದಲಾದ ಅಂಶಗಣದ ಒಂದು ಉನ್ನತ ಸ್ಥಾನದ ಸಾಧನೆಯ ಕಾಲದಲ್ಲಿ ಜಾನಪದದ ಮೂಲಗಳಿಂದ ಕವಿಗಳು ತಮ್ಮ ರಚನೆಗೆ ಛಂದೋರೂಪಕ್ಕೆ ಸ್ಫೂರ್ತಿಯನ್ನು ಪಡೆದಿರುವ ಸಾಧ್ಯತೆ ಇದೆ.

ಜನಪದ ಹಾಡುಗಾರರ ಹಾಡುಗಳಲ್ಲಿ ತ್ರಿಪದಿ, ಚೌಪದಿ, ರಗಳೆ, ಮೊದಲಾದ ಜೋಡಣೆಗಳು ಇರುತ್ತವೆ. ಅವರು ಹಾಡುವಾಗ ಅವರ ಬೇರೆ ಬೇರೆ ರಾಗ, ಲಯಗಳಲ್ಲಿ ಹಾಡುತ್ತಾರೆ. ಆದರಿಂದ ಏರಿಳಿತಗಳು ಸಾಧ್ಯ.

ಅಂತಹ ಏರಿಳಿತಗಳ ಸಂದರ್ಭಕ್ಕೆ ಅನುಗುಣವಾಗಿ ಕ್ರಿಯಾತ್ಮಕ ಗೀತೆಗಳು ಆಯಾ ಸಮಯದಲ್ಲಿ ಪರಿಸರಕ್ಕೆ ತಕ್ಕಂತೆ ಪಾತ್ರವಹಿಸಿವೆ. ಅಂತಹ ಪಾತ್ರ ವಹಿಸಿದ ಗೀತೆಗಳು ಇಲ್ಲಿ ಹೇಳಲಾಗಿದೆ.

ಜನಪದ ಗೀತೆಗಳು ಮುಖ್ಯವಾಗಿ ಕ್ರಿಯಾ ಮೂಲವಾಗಿರುವುದರಿಂದ ಇವು ಕರ್ಮ ಗೀತೆಗಳಾಗಿ ಕೆಲಸ ಮಾಡುತ್ತ ಹಾಡುವ ಪ್ರತಿಯೊಂದು ಗಂಡಸು ಮತ್ತು ಹೆಣ್ಣುಮಕ್ಕಳ ಹಾಡುಗಳು ಅವರ ಕ್ರಿಯೆಗೆ ತಕ್ಕಂತೆ ಕರ್ಮದ ಫಲವಾಗಿ ಸೂಸಿ ಹೊರಹೊಮ್ಮುತ್ತದೆ.

ನಾಟಿ ಮಾಡುವಾಗ, ಗಳೆ ಹೊಡೆಯುವಾಗ, ರಾಶಿ ಮಾಡುವಾಗ, ಹಂತಿ ಕಟ್ಟಿದಾಗ, ಸುಗ್ಗಿಯ ಸಮಯದಲ್ಲಿ ಹಾಗೂ ಬೀಸುವಾಗ ಕುಟ್ಟುವಾಗ, ಕಳೆ ಕೀಳುವಾಗ ಇತ್ಯಾದಿ ಕೆಲಸದಲ್ಲಿ ತೊಡಗಿದ್ದಾಗ ಹಾಡಿರುವ ಹಾಡುಗಳು ಅವರ ಉಸಿರಿಗೆ ತಕ್ಕಂತೆ ಹಾಡಿನ, ದನಿ ದಾಟಿಗೆ ತಕ್ಕಂತೆ ಇರುತ್ತವೆ. ಒಂದೇ ತ್ರಿಪದಿಯನ್ನು ಬೇರೆ ಬೇರೆ ಕೆಲಸ ಮಾಡುತ್ತಾ ಹಾಡಿದಾಗ ಅವರ ಉಸಿರಿನ ಗತಿಯನ್ನೇ ತ್ರಿಪದಿಯು ಅನುಸರಿಸುತ್ತದೆ. ಈ ಕಾರಣದಿಂದ ಹಾಡಿನಲ್ಲಿ ಹಿಗ್ಗು-ಕುಗ್ಗುಗಳಾಗಿ ಅಕ್ಷರದಲ್ಲಿ ಹೆಚ್ಚು ಕಡಿಮೆ ಆಗುತ್ತವೆ. ಎಲ್ಲಾ ಕ್ರಿಯೆಗಳಲ್ಲೂ ಒಂದು ಕ್ರಮಬದ್ಧ ರೀತಿಯಲ್ಲಿ ಅಥವಾ ಗತಿಯಲ್ಲಿ ನಡೆಯುತ್ತವೆ. ಬೀಸುವ ಗಾಳಿ, ಬೀಳುವ ಮಳೆ, ಗ್ರಹಚಲನೆ, ಮುಂತಾದವುಗಳಲ್ಲಿ ಹಾಗೆಯೇ ಸಾಹಿತ್ಯದಲ್ಲೂ ಬಂದಿವೆ. ಅವು ಯಾವ ಕ್ರಮದಲ್ಲಿವೆ ಎಂಬುದನ್ನು ಛಂದಸ್ಸು ತಿಳಿಸುತ್ತದೆ. ಸಾಹಿತ್ಯದಲ್ಲಿ ಭಾವನೆಗಳು ಕ್ರಮಬದ್ಧ ರೀತಿಗೆ ಛಂದಸ್ಸು ಅಥವಾ ಲಯಗಾರಿಕೆ ಎನ್ನಬಹುದು. ಇದನ್ನು ಪದ್ಯದಲ್ಲಿಯೇ ಗುರುತಿಸುವುದು ಹೆಚ್ಚು. ಪದ್ಯ ಓದುವಾಗ ರಾಗವು ಮೇಳವಿಸಿ ಬರುತ್ತದೆ. ಗದ್ಯಕ್ಕಿಂತ ಪದ್ಯದ ಓದುಗರನ್ನು ಕೇಳಿದಾಗ ತೀವ್ರ ರಸಾನುಭವವುಂಟಾಗುತ್ತದೆ. ಕಿವಿಗೆ ಅಪ್ಯಾಯಮಾನ ಹೃದಯಕ್ಕೆ ಅಹಲಾದ ಕರೆ. ನಿರ್ದಿಷ್ಟ ಸಂಖ್ಯೆಯ ಮಾತ್ರೆಗಳು ಅಥವಾ ಅಕ್ಷರಗಳು

ಅಥವಾ ಅಂಶಗಳು ಪುನರಾವರ್ತನೆಯಾಗುವುದರ ಮೂಲಕ ಮಾತಿನಲ್ಲಿ ಲಯ ಸೃಷ್ಟಿಯಾಗುತ್ತದೆ. ಕ್ರಿಯೆ ಮತ್ತು ಬಿಡುವುಗಳ ಪರ್ಯಾಯವೇ ಲಯದ ರಹಸ್ಯ. ಪದ್ಯದ ಆಕರ ಕಣ್ಣಿಗೆ ಗ್ರಾಹ್ಯವಾದರೆ ಲಯ, ಕಿವಿಗೆ ಗ್ರಾಹ್ಯವಾಗುತ್ತದೆ. ಆದರಿಂದ ಇಲ್ಲಿ ಹಾಡುಗಳು ಮನಸ್ಸಿಗೆ ನೆಮ್ಮದಿ ನೀಡಿ, ಆಹ್ಲಾದಕರ ಶಾಂತಿ, ಸಂತೋಷವೆನಿಸುತ್ತದೆ.

'ಛದ್' ಎಂದರೆ ವೇಷ, ಸುತ್ತುವರಿದಿರುವುದು ಎಂದು ಅದನ್ನು ಹೋಗಲಾಡಿಸುವುದೇ ಛಂದಸ್ಸು ಎಂದೂ, ಪಾದಗಳನ್ನು ಹೋಗಲಾಡಿಸುವುದರಿಂದ ವೇದಗಳನ್ನು ಛಂದಸ್ಸು ಎಂದು ಪೂರ್ವಿಕರು ಹೇಳಿದ್ದಾರೆ. ಭಾಷೆಗೆ ವ್ಯಾಕರಣ, ಛಂದಸ್ಸು, ಪದ್ಯ, ಸಾಹಿತ್ಯಕ್ಕೆ ಅನ್ವಯಿಸುತ್ತದೆ.

ಎಲ್ಲಾ ಜಾನಪದ ಹಾಡುಗಳು ಅಂಶಗಣಗಳಿಂದ ಕೂಡಿರುವುದು ಸಂಸ್ಕೃತ ಪ್ರಭಾವದಿಂದ 'ದೇಸಿ' ಪ್ರಭಾವ ಹಿಮ್ಮೆಟ್ಟಿಸಿರಬೇಕು ಎಂದು ಹಿರಿಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿ ಬಿ.ಎಂ.ಶ್ರೀ.ಯವರು ಹೇಳುವಂತೆ ''ಕರಳು ಕರುಳನ್ನು ಮಿಡಿದ, ಅಂತರಂಗ, ಅಂತರಂಗ ತಟ್ಟಿ ಮಾರ್ದನಿಗೊಡುತ್ತದೆ. ಜನಪದ ಛಂದಸ್ಸು ಲಯಗಳು ಸಂಸ್ಕೃತ ಛಂದಸ್ಸಿನ ಪ್ರಭಾವಕ್ಕೆ ಮೊದಲು ಮದನವತಿ ಗೀತಿಕೆ, ಚೌಪದಿ, ಎಳೆ, ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಷಟ್ಪದಿ, ತ್ರಿಪದಿ ಮೊದಲಾದವು ರೂಪಿಸಿಕೊಂಡ ಲಯ, ಛಂದಸ್ಸು ಬಂದಿವೆ. ದ್ರಾವಿಡ ದೇಶಗಳ ಜಾನಪದ ಸಾಹಿತ್ಯಗಳಲ್ಲೂ ಅಂಶಛಂದಸ್ಸು ಕನ್ನಡ ಛಂದಸ್ಸಿನ ಮೂಲ ಸ್ವರೂಪ, ಸಂಸ್ಕೃತ ಪ್ರಭಾವದಿಂದ ಮಾತ್ರಾ ಗಣಕ್ಕೆ ತಿರುಗಿ ಅದೇ ಕನ್ನಡ ಛಂದಸ್ಸಿನ ಗತಿಯೇನೋ ಎನ್ನಿಸಿವೆ.

ಮಾತ್ರಾಗಣಗಳಿಂದಾದ ಪದ್ಯಗಳನ್ನೋ ಗೀತೆಗಳನ್ನೋ ರಾಗವಾಗಿ ಹಾಡಿದಾಗ ಗಣಗಳೆಲ್ಲಾ ಅಂಶಗಣಗಳಿಗೆ ಪರಿವರ್ತಿತವಾಗುತ್ತದೆ. ಎಲ್ಲ ಗೇಯ ಸಾಹಿತ್ಯವೂ ಅಂಶಗಣಗಳಿಂದ ಕೂಡಿದುದು.

ಡಾ. ಬಿ.ಎಸ್.ಗದ್ದಿಗೀಮಠ ಅವರು ಹೇಳುವಂತೆ ''ಛಂದಸ್ಸು ಪದ್ಯರಚನಾ ಗಣ ಪರಿಣಿತಿಯನ್ನು ಹೇಳುವ ರೀತಿ ಯಾವುದೇ ಪದ್ಯವಾಗಲೀ, ಅದು ಛಂದವಿಲ್ಲದೆ ಇರಲಾರದು. ವ್ಯಾಕರಣ ಸೂತ್ರಗಳಿಂದ ಬದ್ಧವಾದ ಗದ್ಯವನ್ನು ಪದ್ಯವಾಗಿ ಮಾಡುವ ಶಕ್ತಿ ಛಂದದಲ್ಲಿದೆ.

ಜನಪದ ಗೀತೆಗಳು ಮುಖ್ಯವಾಗಿ ಕರ್ಮಗೀತೆಗಳು ಅಂದರೆ ಕೆಲಸ ಮಾಡುತ್ತಾ ಹಾಡುವ ಹಾಡುಗಳು, ಕುಟ್ಟುವುದು ಬೀಸುವುದು, ನಾಟಿ ನೆಡುವುದು ಅಥವಾ ಬಿತ್ತುವುದು, ಬಂಡಿ ಹೊಡೆಯುವುದು ಕಳೆ ಕೀಳುವುದು,

ಹಂತಿ ಕಟ್ಟುವುದು, ಗಳೆ ಹೊಡೆಯುವುದು ಮುಂತಾದ ವೇಳೆಯಲ್ಲಿ ಬಿಸಿಲಿಗೆ ಗತಿಗೆ ತಕ್ಕಂತೆ ಹಾಡಿನ ದನಿ, ಧಾಟಿ ಇರುತ್ತದೆ. ಒಂದೆ ತ್ರಿಪದಿಯನ್ನು ಬೇರೆ ಬೇರೆ ಕೆಲಸ ಮಾಡುತ್ತ ಹಾಡಿದಾಗ ಅವರ ಉಸಿರಿನ ಗತಿಯನ್ನೇ ತ್ರಿಪದಿಯ ಗತಿಯು ಅನುಸರಿಸುತ್ತದೆ.

**ಮೇಟಿ ಮೇಳಿಯ ಪದ**

*ಎತ್ತಿಗಿ ಇನಿ ಚಂದ ಕೋಡಿಗಿ ಕೊಡಬಾಸ ಚಂದ*

*ನಡು ಹೊಲದಾಗ ಮೇಟಿದ್ದರ । ಯಜಮಾನ*

*ಇದ್ದಂಗ ಮನಿಯೊಳಗ ॥*

*ಬನ್ನಿ ಮೇಟಿ ತಂದ ಬಸವಣ್ಣನ ಹಚ್ಚಿ*

*ಹಂತಿ ಹೊಲಕ ತರಬೇಕೋ । ಟಿಸಿಲ*

*ಮೇಲ್ಮಾಡಿ ಕಣದಾಗ ಹುಗಿಬೇಕೊ ॥*

*ಆರಿಯ ಮೇಟಿ ಆರಮಳಾ ಉದ್ದತಿ*

*ಹಂತಿಗಿ ಚಂದ ಆಗೇತಿ । ಆ ಮೇಟಿ*

*ಹರಝುರಿ ಬಡಿಗ್ಯಾಕೆತ್ತ್ಯಾನ ॥*

*ಮೇಟಿಯ ಟಿಸಿಲಿನ ಕರಿಯ ಗೊಂಗಡಿ ಹಚ್ಚಿ*

*ಬೆಳತಾನ ಹಂತಿ ಹೊಡಿದರ । ಜ್ವೊಳೆಲ್ಲ*

*ಮುತ್ತಾಗಿ ಉದುರಿ ಬಂದಾವೊ ॥*

*ಹಂಡ ಹವಳ್ಯಾನ ಕಟ್ಟಿ ಗಂಡ ಗುಳಗ್ಯಾನ ಕಟ್ಟಿ*

*ಮಾಲಿಂಗನ ಕಟ್ಟೊ ಮೇಟ್ಯಾಗ । ನಮ್ಮೆತ್ತ*

*ಹಾಡಿದರ ಕಟ್ಟೊ ಕಡಿಸತ್ತೊ ॥*

ಮಡ್ಡಿಯ ಹೊಲ ಎಣಿ ಮಜಲ ಆಗೇತಿ

ದಿಂಡಿನ ಮೇಳಿ ಬತ್ತಿ ಹಿಡಿದ । ಹರಗಿದರ

ಹೊಲವೆಲ್ಲ ಹದವ ಆಗೇತೊ ॥

ಜಾಲಿಯ ಗಿಡದ ಮೇಳ ಗಟ್ಟಿ ಬಾಳೈತಿ

ಗುಡ್ಡದ ಮ್ಯಾಲಿನ ಹೊಲವನ । ಎಡಿ ಹೊಡಿದರೆ

ಹಳ್ಳಿ ಕಳೆಯಲ್ಲಾ ಹಸನಾತೊ ॥

ಮೇಳಿಯ ಮೂಗ ಹಿಡಿದರ ಬಿಗಿಬಾಳೊ

ರೈತ ಮಣಿಸಿದರ ಮಣಿವಲ್ಲದೊ । ನಂ ಬಸವ

ಬಾಲ ಜಾಡ್ಸಿದರ ಮಣಿತತೊ ॥

ಮೇಟಯ ಎತ್ತೊ ಕ್ವಾಟಿಯ ತೆನಿಯಾ

ನಡಿಕಿಯ ಎತ್ತೊ ನಡಮಾಟಾಗೈತೊ . ಕಡಿಸಾಡಿ

ಎತ್ತೊ ಕಂಠಾಣಿ ಗುಂಡೊ ॥

ಕೂರಿಗಿ ಕುಂಟಿ ತಾಳದ ಪದ

ಆರೆತ್ತಿನ ಕೂರಿಗಿ ಹೋರಿಯ ಬೆಳಿಸಾಲೊ

ಕೋರ ಮಾಡ್ಯಾರೋ ಧರ್ಮರೋ । ಹೊಲದಾಗ

ಬೋರ್ಯಾಡತಾನ ಮಳಿರಾಯ ॥

ರನ್ನ ಬಟ್ಟಲಾಶೆಡ್ಡಿ ನುಣ್ಣನ್ನ ಕೋಲುಗಳ

ಹೊನ್ನ ಕೂರಿಗಿ ಸರಿಪಡಿಸಿ । ಬಿತ್ತಿದರ

ಚಿನ್ನ ಬೆಳವಲ ಹೊಲದಾಗ ॥

ಬಿತ್ತುವ ಕೂರಿಗಿ ಮುಂದ್ ಬಿದ್ದಾನೋ ಮಳಿದೇವ
ಎದ್ದಾನೊ ಒಕ್ಕಲಿಗ ಬೆಳತಾನ । ಕೂರಿಗಿ ಕುಂಟಿ
ಬಿದ್ದಾವೋ ಬಡಿಗ್ಯಾನ ಮನಿಮುಂದ ॥
ಊರುವಳಗ ನವ ಮಿಕ್ಕಿಲ ಒಕ್ಕಲು
ಕೂರಿಗಿನೂರ ಕುಡಾನೂರು । ಮೆಟ್ಟ್ಯಾರ
ಆಳು ಮಕ್ಕಳೊಂದು ಆಯ್ದು ನೂರು ॥
ಬಿತ್ತುವ ದಿನಾ ಬಂದು ಎತ್ತ ತಯಾರ ಮಾಡು
ಮುತ್ತಿನ ಕೂರಿಗಿ ಹೊರಗಿಡು । ಮಲ್ಲೇಶಪ್ಪಣ್ಣ
ಪಾರಮ್ಮ ಬಂದು ಉಡಿತುಂಬೊ ॥
ಬೀಗ ಬೀಜ ಹೊತ್ತ ಕುರುಬ ಕೂರಿಗಿ ಹೊತ್ತ
ಮುತ್ತೈದೆ ಮಗಳ ಮುಂದ ಮುಂದ । ಕರ್ಕ್ಯಂಡು
ಬಿಳಿಜ್ವೊಳಾ ಬಿತ್ತಿ ಬರತಾನ ॥
ಅಡಿಗಲ್ಲು ಆಡಿಕಟ್ಟಿ ಪೂಜಿ ಮೊದಲು ಮಾಡಿ
ಕೂರಿಗಿ ಪೂಜಿ ಮೊದಲಿಗಿ । ಮ್ಯಾಲಿರುವ
ಶಿವಲಿಂಗನ ಪೂಜಿ ಸರುವರಿಗೊ ॥
ಕರಿಯ ಗೊಂಗಡಿ ತಂದ ಮುರಿದ ಟೊಪ್ಪಿಗೆ ಮಾಡಿ
ಹೊತ್ತಾನ ದುಂಡಪ್ಪ ಹೆಗಲಿಗೆ । ಕೂರಿಗಿ ದಿಂಡ
ಇಟ್ಟಾನ ತನ್ನ ಮನಿಮುಂದ ॥

ನೆಲಕ್ಕಿ ನೆದರ ತೆಗದೀದ ಬಸವಣ್ಣ

ಯಾರಾದರೇನೊ ಹೊಲದಾಗ । ಬಸವಣ್ಣ

ಜೋಡ ಕೂರಿಗಿ ನಡೆದಾರೊ ॥

## ಬೂದ ಬನದಮ್ಮ - ಕರಿಬಂಟ ಚರಗದ ಪದ

ಬಿತ್ತಿದ ಹೊಲದಾಗ ಬತ್ತಿ ಹಾಯಾಕಿ ಯಾರ

ಮುತ್ತಿನುಡಿಯಕ್ಕಿ ಬನದಮ್ಮ । ಹಾಯ್ದರ

ಬೆಚ್ಚಿ ಬಿದ್ದಾವ ಬಿಳಿಜ್ವಾಳಾ ॥

ಬೂದ್ಯಾಗ ಬಾಸಿಂಗ ಭೂಮಿ ತಾಯಿಗಿ ದಂಡಿ

ಸಾರಿ ಪಾಂಡವರಿಗಿ ಸೇರಿ ಹೂವ । ಹಾಕ್ಕೊಂಡ

ದಿವ್ಯ ಪಡಿದಾರೊ ಮಾನೇದ ॥

ಬೂದಯ್ಯ ಬೂದಯ್ಯ ಎದ್ದು ತೂರಿದ ಮೆದವ

ಬಿದ್ದ ರಾಸೆಲ್ಲ ವಚನಗಳೊ । ಅಲ್ಲಮನು

ಹದ್ದೆ ಏರ್ಯಾನೊ ಕಲ್ಯಾಣ ಗದ್ದುಗೆ ॥

ಬೂದುಗ ಮಾಡಬೇಕೊ । ಕೂದಲ ಕಾಯಬೇಕೊ

ಬೂದನ ಪದವೊಂದ ಅನಬೇಕೊ ।

ಹಂತಿ ಕೊಳ್ಳ ಹರಿಬೇಕೊ ॥

ಕಡಿಗಾಣದ ಕಂಕಿ ಹೆಕ್ಕಿತಗೊಂಡ

ಬೂದಿಯ ತೀಡಿ ಮಾಡಬೇಕೊ । ಕರಿಬಂಟನ

ಕಣದ ಮಗ್ಗಲಿಗೆ ಇಡಬೇಕೊ ॥

ಕರಿಬಂಟನ ಬೂದಿ ಕಣದ ಸುತ್ತಲೂ ಹಾಕಿ
ಮ್ಯಾಲ ಮೇದಿಯ ಸುತ್ತಾಗಿ । ಬೇಡಿದರೆ
ಹಂತಿಯ ರಾಶಿ ಹುಲುಸಾತೊ ॥
ಬೆಚ್ಚು ಗಡಿಗೆಯ ಗುಂಡ ನುಚ್ಚ ಜುನುಕದ ಚೆರಗ
ಬೆಚ್ಚಾಗಿ ಹೊಲಕ ಒಕ್ಕಲಿಗ । ಚೊರಗೊಗಿದ
ಬಿಚ್ಚಿಡಲು ಹುಲುಸು ಹೊಲದೊಳಗ॥
ಪುಂಡಿ ಬದಗಿ ಮೆಣಸಾ ತಂದ ನಡಿಗಿಗಾಕಿ
ಚರಗದ ಪಲ್ಲೇನ ಮಾಡ್ಯಾರ । ಹಂತಿಯ
ಕಣಕ ಎಡಿ ವೈದಾರ ॥

ಬಣವಿ, ಕವಣಿ, ಮೆಟ್ಟು, ಗ್ವಾದಲಿ ಪದ

ಕೋಡನು ತಿರುವುತ ಬಾಲನು ಬೀಸುತ
ಬಸವ ಬಂದಾನೊ ಬಣವಿಗೆ । ಮೇಟಿ ಮೆಟ್ಟು
ಮೇಯಾಕ ನೀನಾರ ಮಗನೊ ಚೆನ್ನ ಬಸವಾ ॥
ತೆನಿಕಣಿಕಿ ಮುರದೈತಿ ಹೊಲದಾಗ ಬಿದ್ದೈತಿ
ಚಾಪ ಹಾಕಿ ಒಗದೈತಿ । ಹೊಲದಾಗ
ರೈತ ಗುಡ್ಡದಂತಾ ಬಣವಿ ಒಟ್ಟ್ಯಾನೊ ॥
ಕಣಕಿಯ ಬಣವಿ ಹೊಟ್ಟಿನ ಬಣವಿ
ಒಟ್ಟ್ಯಾನೊ ರೈತ ಹೊಲದಾಗ । ಅನುಗಾಲ

ಬಸವಣ್ಣನ ಹೊಟ್ಟಿಗೆ ಆಗೇತಿ ॥

ನವಣೆಯ ಹೊಲದಾಗ ಹವಣ ಮಂಚಾ ಹಾಕಿ

ಕವಣೆಯ ಕಲ್ಲಗಿ ಹುರಿಗೆಜ್ಜೊ ।ಕಟಿಕೊಂಡ

ಒಗದಾನೊ ದುಂಡಪ್ಪ ಗುಬ್ಬಿ ಹಂಡಿಗೊ ॥

ಪದಿನಾರ ಎತ್ತ ನೋಡ ಎದರ ಗ್ವಾದಲಿ ನೋಡ

ಚದರಂಗ ಮ್ಯಾಲ ಮಲಗ್ಯಾನೊ। ನಂ ಬಸವ

ನೆದರಾಗಿ ಮೇವ ತಿನುವಲ್ಲೊ ॥

ಗ್ವಾದಲಿ ಕಂಬಕ ಬಿಗಿದಲೆ ಎಳಿಗರಾ

ಕಂಬ ಹರಕೊಂಡ ಹೋಗೆತೊ । ನಂ ಕರಾ

ಹಂತಿಯ ಹೊಲಕ್ಕೆ ಬಂದೈತಿ ॥

ಎಮ್ಮೆ ಇಳಿದು ಯಂಟತ್ತು ದಿನಾ ಆಯಿತು

ಗ್ವಾದಲಿ ತುಂಬ ಹೊಟ ಕಣಿಕಿ । ತಿಂದು

ಜಲ್ಲಿ ತುಂಬ ಸೆಗಣಿ ಹಾಕೇತಿ ॥

ಆನಿ ಕಾಲಂತಹ ಮೂರ ಕಾಲಿನ ಮೆಟ್ಟ

ಹಂತಿಯ ಮುಂದ ನಿಂತೈತಿ । ಹಂತಿ ಹೊಡಿವಾಗ

ಬಸವಣ್ಣಗ ತೊಡಕಾಲ ಬಡಿದೈತಿ ॥

ಗಾಳಿ ಬಿಟ್ಟಾಗ ಮೆಟ್ಟ ಕಣದಾಗಿಟ್ಟ

ಮೆಟ್ಟಿನಮ್ಯಾಲ ನಿತಕೊಂಡ । ದುಂಡಪ್ಪ

ಬೆಳತನಕಾ ಮದವ ತೂರ್‍ಯಾನೊ ॥

ಬಸವಣ್ಣನ (ಎತ್ತುಗಳ) ಪದ

*ಹಂತೀಯ ಹೊಡಿಬೇಕ ಸಂತಸಪಡಬೇಕ*

*ಹುಲಿಗೆಂಬ ಸಬುದ ನುಡಿಬೇಕ ನಂತ ಬಸವ*

*ಪಾದಕ್ಕ ಶರಣ ಮಾಡ್ಬೇಕ ॥*

*ಬೆಳ್ಳನ್ನ ಬಿಳಿಯೆತ್ತ ಬೆಳ್ಳಿಯ ಬಾರಕೋಲ*

*ಬಂಗಾರದ ಶೆಡ್ಡಿ ಬಲಗೈಗೊ ಹಿಡಿಕೊಂಡ*

*ಹೊನ್ನ ಬಿತ್ಯಾರ ಹೊಳಿಸಾಲೊ ॥*

*ಮೂಡಲ ಹೋರೀಗಿ ಮುರಗೀಯ ಕೋಡಬಾಸ*

*ಸಣ್ಣ ಗೆಜ್ಜಿಯ ಭೀಮುಯಾಗ ಕಟ್ಟಿಕೊಂಡ*

*ಬೋರ್ಯಾಡಿ ಹಂತಿ ಹೊಡಿದಾನೊ ॥*

*ಬೆಳ್ಳನ್ನ ಎರಡೆತ್ತ ಬೆಳ್ಳಿಯ ಕೊಡಬಾಸ*

*ಹಳ್ಳದ ಹೊಲವ ಹರಗ್ಯಾವೊ ನಂ ಬಸವನ*

*ತೆಳ್ಳನ್ನ ಹೊಟ್ಟಿ ಹಸಿದಾವೊ ॥*

ಬಂಡಿ ಸೆಳ್ಳು ನಗದ ಪದ

*ಬಸವ ಬಂಡಿಯನೇರಿ ಶಿವನು ನಂದಿಯನೇರಿ*

*ಪಾರ್ವತಿದೇವಿ ರಥವೇರಿ । ಬರುವಾಗ*

*ಬಂದಂತಾ ಮಾಡ ಬಯಲಾತೊ ॥*

*ಹಂಡೆತ್ತ ಬಂಡೆತ್ತ ಬಂಡಿಗಿ ಮಿಗಿಲಾದೆತ್ತ*

ಸರಕಾರದತ್ತ ಶಿವರಾಮ । ಮಾರಿದರ
ಶೆಟ್ಟಿಯ ಸಾಲ ಹರಿಲಿಲ್ಲೊ ॥
ಎರಿಯ ಹೊಲದಿಂದ ಬಂಡಿಯ ತರುವಾಗ
ಹೊಲಗೇರಿ ಮುಂದ ನಗ ಮುರಿದು । ಈ ಊರ
ಹರೂರ ಹುಡಿಗಿಯ ನಡ ಮುರಿತೊ ॥
ಬಂಡಿ ಬಂಟಂಗ ಮೂಲ ಮಿಂಡಿ ಮುದುಕಗ ಮೂಲ
ಹೆಂಬಂಡಿ ಮೂಲ ಬಸವಗ । ಹಾರೂರ ಹೆಣ್ಣ
ರಂಡ್ಯಾದರ ಮೂಲ ತವರೀಗಿ ॥

ರಾಗೋಲು, ಕುಡಗೋಲು, ಬ್ಯಾಕೋಲು ಪದ

ಕಡಗೋಲು ಕುಡಗೋಲು ಸೆಡ್ಡಿ ಮಡ್ಡೆಯ ಕೋಲು
ಬಡಿಗಿ ಬ್ಯಾಕೋಲು ಬಾರಕೋಲು । ಉರ್ಗೋಲು
ಚಿತ್ರಾದ ಕೋಲು ರಾಗೋಲು ॥
ಕುಂಬಳ ಕುಡಿಸಣ್ಣ ಕುಡಗೋಲು ಹಿಡಿಸಣ್ಣ
ಜ್ವಾಳಾ ಕೊಯ್ಯುವಳ ನಡಸಣ್ಣ । ನಂ ಬಸವನ
ಮ್ಯಾಲಿರುವ ನಗಾಸಣ್ಣೊ ॥
ಬ್ಯಾಕೊಲ ಭಾರಹಾಕಿ ಶೇಂಗಾನ ಹರಗಿದರ
ಕುಂಟಿ ಮ್ಯಾಗ ಬಳ್ಳಿಯೋ । ಬಂದತಿ
ಶೇಂಗಾ ಹೊಲ ಹಸನಾತೊ ॥

*ಕುಡಗೋಲ ಕೈಯಾಗ ಥಳ ಥಳ ಹೊಳಿತತಿ*

*ಜ್ವಾಳದ ತೆನಿಯ ಕೊಯಾಕ । ಯರರಘುರಿ*

*ಕಂಬಾರ ಕುಡಗೋಲಿಗಿ ನೀರ ಕುಡಿಸ್ಯಾಣ ॥*

**ಹಾಡಿನ ಮಟ್ಟುಗಳು :**

ಜನಪದ ಗೀತ ಸಾಹಿತ್ಯದಲ್ಲಿ ಹಾಡಿನ ಮಟ್ಟುಗಳನ್ನು ಗುರುತಿಸುವುದು ಅಷ್ಟೇ ಕಷ್ಟಕರವಾದ ಸಂಗತಿ. ಏಕೆಂದರೆ ಜನಪದರು ಮೂಲತಃ ವಿದ್ಯಾವಂತರಲ್ಲ. ಅವರಲ್ಲಿ ಛಂದಸ್ಸು, ಲಯ, ತಾಳ, ಗಳ ಬಗ್ಗೆ ಕಲ್ಪನೆ ಇರುವುದಿಲ್ಲ. ಆದರೂ ಸಹ ತಮ್ಮ ಅನುಭವದ ಅಮೃತವಾಣಿಯನ್ನು ತಮ್ಮ ಸುಖ, ದುಃಖಗಳಲ್ಲಿ ತೋಡಿಕೊಂಡಿದ್ದಾರೆ. ತೋಡಿಕೊಂಡ ಪ್ರತಿ ಹಾಡುಗಳಲ್ಲಿ ಅವರ ಕರ್ಮ, ತ್ಯಾಗ, ಧರ್ಮ, ರೀತಿ-ನೀತಿ, ಆಚಾರ-ವಿಚಾರ, ಲೋಕರೂಢಿ, ಸಂಪ್ರದಾಯ, ಸಮಾಜ, ಪರಿಸರ, ನದಿ, ಗುಡ್ಡ-ಬೆಟ್ಟ, ಪ್ರಾಣಿ-ಪಕ್ಷಿ, ಸೂರ್ಯ-ಚಂದ್ರ, ನಕ್ಷತ್ರ, ದೈವ, ದೇವರು-ಸಂಸ್ಕೃತಿ ಇತ್ಯಾದಿ ಜನಜೀವನದಲ್ಲಿ ಅಡಕವಾಗುವ ಪ್ರತಿ ಕೆಲಸದ ಹೆಜ್ಜೆ ಹೆಜ್ಜೆಯಲ್ಲಿ ಆ ಸಂದರ್ಭದ ವಿಚಾರಧಾರೆಗಳು ನೀರಿನಂತೆ ಜುಳಜಳವಾಗಿ ಹರಿದು ಹಳ್ಳ-ಕೊಳ್ಳ ನದಿಯಾಗಿ ಸಮುದ್ರ ಸೇರಿ ಸಮುದ್ರದಲ್ಲಿ ಅನೇಕ ರೀತಿಯಾಗಿ ತಮ್ಮ ಸ್ವಾದವನ್ನು ನೀಡಿದಂತೆ ಇಲ್ಲಿ ಬರುವ ಗಂಡು ಮಕ್ಕಳ ಹಾಗೂ ಹೆಣ್ಣುಮಕ್ಕಳ ಮತ್ತು ಮಕ್ಕಳ ಕ್ರಿಯೆ ಎಲ್ಲಾ ಪರಿಕರಗಳಲ್ಲಿ ಪರಿಪಕ್ವವಾಗಿ ಮೂಡಿ ಬರುತ್ತವೆ.

ಇಂತಹ ಪರಿಮಳ ಬೀರಿದ ಗಂಡಸರ ಹಾಗೂ ಹೆಣ್ಣುಮಕ್ಕಳ ಕ್ರಿಯಾತ್ಮಕ ಗೀತಗಳಲ್ಲಿ ಅವರ ಕೆಲಸದ ಸಮಯದಲ್ಲಿ ಅವರಿಗೆ ಅನುಕೂಲವಾದಂತೆ ಹಾಡಿ ಹೊಗಳಿದ್ದಾರೆ. ಇಂತಹ ಹಾಡುಗಳು ಇವತ್ತಿನ ದಿನಗಳಲ್ಲಿ ಕಂಡುಕೊಳ್ಳುವುದು ತುಂಬಾ ಕಷ್ಟಕರವಾದ ಸಂಗತಿಯಾಗಿದೆ. ಆದರೂ ಹಲ ಕೆಲವು ದೊರೆತ ಮಾಹಿತಿಗಳನ್ನು ಕಲೆಹಾಕಿ ವಿಂಗಡಿಸಿ ಅನೇಕ ರೀತಿಯ ಕ್ರಿಯಾತ್ಮಕ ಹಾಡುಗಳನ್ನು ವಿವರಿಸಲಾಗಿದೆ. ಅಂತಹ ಕ್ರಿಯಾ ಸ್ವರೂಪದ ಹಾಡುಗಳು ಗಂಡಸರಲ್ಲಿ ಹಾಗು ಹೆಂಗಸರಲ್ಲಿ ಕಂಡುಕೊಂಡು ಅವುಗಳ ಏರಿಳಿತಗಳನ್ನು ಹೇಳಲಾಗಿದೆ. ಅಂತಹ ಏರಿಳಿತದ ಪದ್ಯಗಳನ್ನು ಆಯಾ ಅಧ್ಯಯನದ ಹಂತಗಳಲ್ಲಿ ಎಳೆತಗಳನ್ನು ಅಕ್ಷರಗಳ ಮೂಲಕ ತೋರಿಸಲಾಗಿದ್ದು ಅವುಗಳಿಗೆ ಸಂಬಂಧಿಸಿದ ಕೆಲವು ತ್ರಿಪದಿಗಳನ್ನು ಉದಾಹಣೆಗೆ ನೋಡಬಹುದು.

UU - U U - U -U -U UUUU
ಕುಡಗೋಲ ಕೈಯಾಗ ಥಳ ಥಳ ಹೊಳಿತತಿ
-UUUUU U - U UU-U
ಜ್ವಾಳದ ತೆನಿಯ ಕೊಯಾಕ । ಯರಝುರಿ
- -U U U - UU -U UU -U
ಕಂಬಾರ ಕುಡಗೋಲಿಗಿ ನೀರ ಕುಡಿಸ್ಯಾಣ ॥

-U -U -U UUU-U -U
ಬನ್ನಿ ಮೇಟಿ ತಂದ ಬಸವಣ್ಣನ ಹಚ್ಚಿ
- U UU U UU-U UUU
ಹಂತಿ ಹೊಲಕ ತರಬೇಕೋ । ಟಿಸಿಲ
- - U UU-U UU -U
ಮೇಲ್ಮಾಡಿ ಕಣದಾಗ ಹುಗಿಬೇಕೊ ॥

-UU - U -UU- - UU
ಆರಿಯ ಮೇಟಿ ಆರಮಳಾ ಉದ್ದತಿ
- UU - U --U - - U
ಹಂತಿಗಿ ಚಂದ ಆಗೇತಿ । ಆ ಮೇಟಿ
UU-U U -U - -U
ಹರಝುರಿ ಬಡಿಗ್ಯಾ ಕೆತ್ತ್ಯಾನ ॥

- U U U U U UUU UU- U
ಮೇಳಿಯ ಮೂಗ ಹಿಡಿದರ ಬಿಗಿಬಾಳೊ
UU UUUUUU U -U U - UUU
ರೈತ ಮಣಿಸಿದರ ಮಣಿವಲ್ಲದೊ । ನಂ ಬಸವ
- U - -U U UUUU
ಬಾಲ ಜಾಡ್ಸಿದರ ಮಣಿತತೊ ॥

-UU UUU -- --- UU-U
ಬಿತ್ತುವ ಕೂರಿಗಿ ಮುಂದ್ ಬಿದ್ದಾನೋ ಮಳಿದೇವ
- - U -UUU UU-U UUU -U
ಎದ್ದಾನೊ ಒಕ್ಕಲಿಗ ಬೆಳತಾನ । ಕೂರಿಗಿ ಕುಂಟಿ
- - - U- - U UU - U
ಬಿದ್ದಾವೋ ಬಡಿಗ್ಯಾನ ಮನಿಮುಂದ ॥

U U- U - U- U U U U UU - U
ಅಡಿಗಲ್ಲು ಆಡಿಕಟ್ಟಿ ಪೂಜಿ ಮೊದಲು ಮಾಡಿ
U U UU U U U UU - U U U
ಕೂರಿಗಿ ಪೂಜಿ ಮೊದಲಿಗಿ । ಮ್ಯಾಲಿರುವ
UU- UU U U UUUUU
ಶಿವಲಿಂಗನ ಪೂಜಿ ಸರುವರಿಗೊ ॥

U- U UUU UU- U UU- U
ನೆಲಕ್ಕಿ ನೆದರ ತೆಗದೀದ ಬಸವಣ್ಣ
- - U - U U U - U UU-U
ಯಾರಾದರೇನೊ ಹೊಲದಾಗ । ಬಸವಣ್ಣ
- U UUU UU- U
ಜೋಡ ಕೂರಿಗಿ ನಡೆದಾರೊ ॥

- - U - - U - U - UU - U
ಬೂದ್ಯಾಗ ಬಾಸಿಂಗ ಭೂಮಿ ತಾಯಿಗಿ ದಂಡಿ
- U - U U U U- U U U - - U
ಸಾರಿ ಪಾಂಡವರಿಗಿ ಸೇರಿ ಹೂವ । ಹಾಕ್ಕೊಂಡ
- U UU- - - - U
ದಿವ್ಯ ಪಡಿದಾರೊ ಮಾನೇದ ॥

- U UUU U U- - U UUU-U
ಪುಂಡಿ ಬದಗಿ ಮೆಣಸಾ ತಂದ ನಡಿಗಿಗಾಕಿ
UUUU - - U - - U -U U
ಚರಗದ ಪಲ್ಲೇನ ಮಾಡ್ಯಾರ । ಹಂತಿಯ
UUU UUU - U
ಕಣಕ ಎಡಿ ವೈದಾರ ॥

- U U UUUU - UU - UU
ಕೋಡನು ತಿರುವುತ ಬಾಲನು ಬೀಸುತ
UUU- - U UUUU - U - U
ಬಸವ ಬಂದಾನೊ ಬಣವಿಗೆ । ಮೇಟಿ ಮೆಟ್ಟು
- - U- - U UUU - U UU-
ಮೇಯಾಕ ನೀನಾರ ಮಗನೊ ಚೆನ್ನ ಬಸವಾ ॥
UUUUU UUUU UU -U - UU
ತೆನಿಕಣಿಕಿ ಮುರದೈತಿ ಹೊಲದಾಗ ಬಿದ್ದೈತಿ

- U - U UUUU U U - U
ಚಾಪ ಹಾಕಿ ಒಗದೈತಿ । ಹೊಲದಾಗ
UU -U - - UUU - - U

- - U U U - U - UUUU-U
ಹಂತೀಯ ಹೊಡಿಬೇಕ ಸಂತಸಪಡಬೇಕ
U U-U UUU UU- U -U UUU
ಹುಲಿಗೆಂಬ ಸಬುದ ನುಡಿಬೇಕ ನಂತ ಬಸವ
- - U UUU - - U
ಪಾದಕ್ಕ ಶರಣ ಮಾಡ್ಬೇಕ ॥

ರೈತ ಗುಡ್ಡದಂತಾ ಬಣವಿ ಒಟ್ಯಾನೊ ॥
UUUU UUU - U U UUU
ಕಣಕಿಯ ಬಣವಿ ಹೊಟ್ಟಿನ ಬಣವಿ
- - U UUUU - U U U-U
ಒಟ್ಟಾನೊ ರೈತ ಹೊಲದಾಗ । ಅನುಗಾಲ
U U -UU - UU - - U
ಬಸವಣ್ಣನ ಹೊಟ್ಟಿಗೆ ಆಗೇತಿ ॥

UUU - -U U U - U - U -U
ಮೂಡಲ ಹೋರೀಗಿ ಮುರಗೀಯ ಕೋಡಬಾಸ
-U - U U - U - U U- -U
ಸಣ್ಣ ಗೆಜ್ಜಿಯ ಭೀಮಯಾಗ ಕಟ್ಟಿಕೊಂಡ
- - U - U U U- U
ಬೋರ್‍ಯಾಡಿ ಹಂತಿ ಹೊಡಿದಾನೊ ॥

- - U UU-U -UU - U - U
ಬೆಳ್ಳನ್ನ ಬಿಳಿಯೆತ್ತ ಬೆಳ್ಳಿಯ ಬಾರಕೋಲ
- - UU - U UUUU U U - U
ಬಂಗಾರದ ಶೆಡ್ಡಿ ಬಲಗೈಗೊ ಹಿಡಿಕೊಂಡ
-U - - U U U - U
ಹೊನ್ನ ಬಿತ್ಯಾರ ಹೊಳಿಸಾಲೊ ॥

- -UU U-U- UUU - U -U
ಬೆಳ್ಳನ್ನ ಎರಡೆತ್ತ ಬೆಳ್ಳಿಯ ಕೊಡಬಾಸ
-UU UUU- UUU- - UUUU
ಹಳ್ಳದ ಹೊಲವ ಹರಗ್ಯಾವೊ ನಂ ಬಸವನ
- - U - U UU- -
ತೆಳ್ಳನ್ನ ಹೊಟ್ಟಿ ಹಸಿದಾವೊ ॥

- -UU UUU - U U UU - U
ಆರೆತ್ತಿನ ಕೂರಿಗಿ ಹೋರಿಯ ಬೆಳಿಸಾಲೊ
- U - - - - - - UU - U
ಕೋರ ಮಾಡ್ಯಾರೋ ಧರ್ಮರೋ । ಹೊಲದಾಗ
- - U -U UU- U
ಬೋರ್ಯಾಡತಾನ ಮಳಿರಾಯ ॥

U - U U - U - U U UU UUU
ಬೂದಯ್ಯ ಬೂದಯ್ಯ ಎದ್ದು ತೂರಿದ ಮೆದವ
- U - -U UUUUU - U U U
ಬಿದ್ದ ರಾಸೆಲ್ಲ ವಚನಗಳೊ । ಅಲ್ಲಮನು
- U - - U - - U - UU
ಹದ್ದೆ ಏರ್‍ಯಾನೊ ಕಲ್ಯಾಣ ಗದ್ದುಗೆ ॥

U U U - U - U U UU - U - -
ಬೂದುಗ ಮಾಡಬೇಕೊ । ಕೂದಲ ಕಾಯಬೇಕೊ
UUU U U - U UU- U
ಬೂದನ ಪದವೊಂದ ಅನಬೇಕೊ ।
- U - U U U-U
ಹಂತಿ ಕೊಳ್ಳ ಹರಿಬೇಕೊ ॥

UUU - U U - U UUU - U U - U
ಬಸವ ಬಂಡಿಯನೇರಿ ಶಿವನು ನಂದಿಯನೇರಿ
- - - - U U--U UU - U
ಪಾರ್ವತಿದೇವಿ ರಥವೇರಿ । ಬರುವಾಗ
- - - - U UU- U
ಬಂದಂತಾ ಮಾಡ ಬಯಲಾತೊ ॥

- - U - - U - UU U U - - U
ಹಂಡೆತ್ತ ಬಂಡೆತ್ತ ಬಂಡಿಗಿ ಮಿಗಿಲಾದೆತ್ತ
UU-U-U UU- U - UUU
ಸರಕಾರದತ್ತ ಶಿವರಾಮ । ಮಾರಿದರ
- U U - U UU - U
ಶೆಟ್ಟಿಯ ಸಾಲ ಹರಿಲಿಲ್ಲೊ ॥

UU - U - U - U - U - U U - U
ಕಡಗೋಲು ಕುಡಗೋಲು ಸೆಡ್ಡಿ ಮಡ್ಡೆಯ ಕೋಲು
UUU - - U - U - U - - U
ಬಡಿಗಿ ಬ್ಯಾಕೋಲು ಬಾರಕೋಲು । ಉರ್ಗೋಲು
- - U - U - - U
ಚಿತ್ರಾದ ಕೋಲು ರಾಗೋಲು ॥

- U U U U-U U U - U UU-U
ಕುಂಬಳ ಕುಡಿಸಣ್ಣ ಕುಡಗೋಲು ಹಿಡಿಸಣ್ಣ
- - - U UU UU -U - U U U
ಜ್ವಾಳಾ ಕೊಯ್ಯುವಳ ನಡಸಣ್ಣ । ನಂ ಬಸವನ
- U UU U -- U
ಮ್ಯಾಲಿರುವ ನಗಾಸಣ್ಣೊ ॥

- UUUU - U - UU U U -U - U
ಎತ್ತಿಗಿ ಇನಿ ಚಂದ ಕೋಡಿಗಿ ಕೊಡಬಾಸ ಚಂದ
UU U U- U - -UU UU - U
ನಡು ಹೊಲದಾಗ ಮೇಟಿದ್ದರ । ಯಜಮಾನ
- - U U UU UU
ಇದ್ದಂಗ ಮನಿಯೊಳಗ ॥

ಈ ಎಲ್ಲ ಹಾಡುಗಳ ಮಟ್ಟವು ಹೇಗೆ ಏರುತ್ತವೆ ಅಥವಾ ಹೇಗೆ ಇಳಿಯುತ್ತವ ಮತ್ತು ಅವು ಸಮಾಂತರದಲ್ಲಿ ಸಾಗುತ್ತವೆ ಎಂದು ಖಡಾಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ಅದರಂತೆ ಹಿಂದಿನ ತಜ್ಞರು ಸಹ ಖಂಡಿತವಾದ ಅಭಿಪ್ರಾಯವನ್ನು ಸಹ ಹೇಳಿಲ್ಲ. ಆದ್ದರಿಂದ ಹಿರಿಯರ ಹಾಡುಗಳನ್ನು ಕೇಳಿ ಅವರ ಗೇಯತೆಗೆ ತಕ್ಕಂತೆ ಏರಿಳಿತಗಳ ಮಟ್ಟಗಳನ್ನು ಅಂತಹ ಹಾಡುಗಳ / ಕ್ರಿಯೆಗಳನ್ನು ಆಯಾ ಸಂದರ್ಭದ ಕೆಲಸಕ್ಕೆ ಮತ್ತು ಜನಪದರು ರೈತರಿಗೆ ನೇರವಾದ ಸಂಬಂಧವಿರುತ್ತದೆ.

ಅದರಂತೆ ಕೆಲಸದ ಹಾಡುಗಳಲ್ಲಿ ಕಂಡು ಬರುವ ಬಂಡಿಯ ಹಾಡುಗಳಲ್ಲಿ ಬಲ್ಲೋಲಿ ಹಾಕುವುದು, ಗಳೆ ಹಾಡಿನಲ್ಲಿ ದಾ... ದಾ... ಎಂದು ಧ್ವನಿ ಎಳೆಯುವುದು ಮತ್ತು ಮಟ್ಟಿ ಹಾಡಿನಲ್ಲಿ ಸ್ವಲ್ಪ ಎಳೆದು ಮತ್ತೆ ಎರಡನೆಯ ಚರಣ ಹೇಳುವುದು ಇತ್ಯಾದಿ ಹೀಗೆ ಹಾಡುವ ಪದ್ಯದ ಮುಂದೆ ಎಳೆದೂ ತೋರಿಸಿದೆ. ಅದರಂತೆ ಮಟ್ಟಗಳು ಏರಿಳಿತಕ್ಕೆ ಸಾಗಿ ಸಾರುತ್ತವೆ.

ಅದರಂತೆ ಹೆಂಗಸರ ಹಾಡಿನಲ್ಲಿ ಕಂಡುಬರುವ ಬೀಸುವ ಹಾಡಿನಲ್ಲಿ ಮುಕ್ಕು ಹಾಕಿ ಒಂದೊಂದು ಚರಣ ಇಬ್ಬರು ಅಥವಾ ಒಬ್ಬರು ಒಂದೇ ತಾಳದಲ್ಲಿ ಸ್ವರ-ಅಕ್ಷರ, ದೀಪಾಕ್ಷರ ಒಂದೇ ಚರಣದಂತೆ ಎಳೆದು ಎಳೆದು ಹೇಳುತ್ತಾರೆ. ಹಾಗೂ ಕುಟ್ಟುವ ಹಾಡಿನ ಕ್ರಿಯೆಯಲ್ಲಿ ಸುಯ್ ಸುಯ್ ಎಂದು ಅಂತರಾಳದ ಉಸಿರು ಬರುತ್ತದೆ. ಇಲ್ಲಿ ಒಂದು ಚರಣದ ಅರ್ಧ ಮಾತ್ರ ಅನೇಕ ಸಲ ಹೇಳಿ ಹಾಡುತ್ತಾರೆ. ಮತ್ತು ಕಳೆ ಕೀಳುವ ಹಾಡುಗಳಲ್ಲಿ ಹೆಚ್ಚು ಜನರು ಇರುತ್ತಿದ್ದರಿಂದ ಇಲ್ಲಿ ದೇವತೆಗಳ ಬಗ್ಗೆ ಹೆಚ್ಚು ಹಾಡು ಒಂದೇ ಲಯದಲ್ಲಿ ಒಂದೇ ಮಟ್ಟದಲ್ಲಿ ಸಾಗಿ ಬರುತ್ತವೆ. ನಾಟಿಯ ಹಾಡುಗಳಲ್ಲಿ ಭೂದೇವಿಯ ವರ್ಣನೆಯ ಹಾಡುಗಳು ಮತ್ತು ಬೆಳೆ ಕಣಗಳ ಹಾಡುಗಳು ಒಂದೇ ಮಟ್ಟದಲ್ಲಿ ಬರುತ್ತವೆ. ಹಾಗೂ ಸುಗ್ಗಿಯ ಸಂದರ್ಭದಲ್ಲಿ ಗಂಡರಸ ಜೊತೆ ಹಾಡುವಾಗ ಧ್ವನಿಗೂಡಿಸಿ ಹೇಳುತ್ತಾರೆ. ಮತ್ತು ತೆನೆ ಸೂಸುವಾಗ ರಾಶಿಯ ಹುಲಸಿನ ಬಗ್ಗೆ ಲಯದ ಮಟ್ಟ ಏರುತ್ತದೆ. ಇತ್ಯಾದಿ ರೀತಿಯಾಗಿ ಲಯದ ಮಟ್ಟುಗಳು ಬೇರೆ ಬೇರೆಯಾಗಿ ಹಾಡುವ ಹಾಡುಗಾರರ ಎಳೆತ ಮೇಲೆಯೇ ಅವಲಂಬಿಸಿರುತ್ತದೆ. ಅದರಂತೆ ಮಕ್ಕಳ ಕ್ರಿಯಾ ಚಟುವಟಿಕೆಗಳಲ್ಲಿ ಹಾಡುಗಳ ಮಟ್ಟ ಇಲ್ಲಿ ಹುಡುಗರ ಧ್ವನಿ ಮತ್ತು ಹುಡುಗರ ಮಾತಿನ ಶೈಲಿಯ ಮೇಲೆ ಅವಲಂಬಿಸಿರುತ್ತದೆ ಎಂಬಿತ್ಯಾದಿಯಾಗಿ ಹೇಳಲಾಗಿದೆ. ಎಲ್ಲಾ ಕ್ರಿಯಾತ್ಮಕ ರೂಪದಲ್ಲಿ ರೂಪತಾಳಿ ಅವರ ಮನಸ್ಸಿನ ರೂಪವನ್ನು ಹದಮಾಡಿ ಹಸನು ಮಾಡುತ್ತದೆ.